ಕೊಟ್ಟಿದ್ದಾರೆ, ಅದರ ಬಗ್ಗೆ ತಾವು ಏನು ಮಾಡಿರುವುದಿಲ್ಲ. ಅದಕ್ಕೆ ನಾವೆಲ್ಲರೂ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ: ಇವರು ಅಧಿಕಾರದಲ್ಲಿದ್ದು ಏನು ಮಾಡದೆ ಇರುವರು. ಆ ಭಾಗದ ಅಭಿವೃದ್ಧಿ ಆಗುವುದನ್ನು ಹಾಳು ಮಾಡಿದವರು. ನಾಚಿಕೆ ಗೇಡು. ಆ ಭಾಗದ ಜನರಿಗೆ ನೀವು ಏನು ಮಾಡಿದ್ದೀರಿ, ನಾವು ಏನು ಮಾಡಿದ್ದೇವೆಂದು ಗೊತ್ತಿದೆ.

(ಗೊಂದಲ)

ಅಧ್ಯಕ್ಷರು: ಅವರು ವಾಕ್‌ಔಟ್ ಮಾಡಿದ್ದಾರೆ, ನೀವು ಏತಕ್ಕಾಗಿ ಕೂಗುತ್ತೀರಿ, ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬಾಗಿಲು ತೆಗೆದು ಅವರನ್ನು ಕಳುಹಿಸಿಕೊಡಿ.

ಶ್ರೀ ಅರಗ ಜ್ಞಾನೇಂದ್ರ: ಅಧಿಕಾರ ಇದ್ದಾಗ ಏನು ಕೆಲಸ ಮಾಡದೆಯೇ oppositionನಲ್ಲಿ ಕುಳಿತುಕೊಂಡಾಗ ಸಭಾತ್ಯಾಗ ಮಾಡುವುದು ಮಹತ್‌ವಾದ ನೀವು ಬೇರೆ ಏನು ಮಾಡುವುದಿಲ್ಲ.

ಅಧ್ಯಕ್ಷರು: ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಿದ್ದಾರೆ. ಎಲ್ಲರೂ ಕುಳಿತುಕೊಳ್ಳಿ. ಆಯಿತು, ಉತ್ತರ ಕೊಡುವುದನ್ನು ಕೇಳುತ್ತೀರೋ ಅಥವಾ ಇಲ್ಲವೋ?

ಶ್ರೀ ಬಿ.ಆರ್. ಪಾಟೀಲ್: ನಾನು ರಾಜಕೀಯವನ್ನು ಬೆರೆಸುವುದಿಲ್ಲ.

ಅಧ್ಯಕ್ಷರು: ಅವರು ಉತ್ತರ ಹೇಳಿದ ಮೇಲೆ ತಾವು clarification ಕೇಳಿ.

ಶ್ರೀ ಬಿ.ಆರ್.ಪಾಟೀಲ್: ನಾನು ವಾಸ್ತವಾಂಶಗಳನ್ನು ಹೇಳಿದ ಮೇಲೆ ಅವರು ಉತ್ತರವನ್ನು ಕೊಟ್ಟರೆ ಒಳ್ಳೆಯದು. ತಮಗೂ ಕೂಡ ಮನವರಿಕೆಯಾಗುತ್ತದೆ. ಇಲ್ಲದಿದ್ದರೆ ತಪ್ಪು ಉತ್ತರಗಳಿಗೆ ಅನುಕೂಲವಾಗುತ್ತದೆ.